ದಿನಾಂಕ 14-06-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ.ಬಿ.ಡಿ. ವಕೀಲರಿಂದಃ**

ನಾನು ಸ್ನಾತ್ತಕೋತ್ತರ ಪದವೀಧರ. ಈ ದಾವೆ ಹೂಡಲು ಹಾಗೂ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೂ ನಾನೇ ಮಾಹಿತಿ ಕೊಟ್ಟಿರುತ್ತೇನೆ ದಾವಾ ಸ್ವತ್ತನ್ನು ನನ್ನ ತಾಯಿ ಅಂದರೆ 1 ನೇ ವಾದಿ 1981 ರಲ್ಲಿ ಖರೀದಿಸಿರುತ್ತಾರೆ. ಇದು ನನ್ನ ತಾಯಿಯ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. 2020 ರಲ್ಲಿ ನಾವು ಹಿಸ್ಸೆ ಮಾಡಿಕೊಂಡಿರುತ್ತೇವೆ. ಈ ಬಗ್ಗೆ ಯಾವುದೇ ಬರವಣಿಗೆ ಮಾಡಿಕೊಂಡಿರುವುದಿಲ್ಲ. ಯಾರು ಯಾರಿಗೆ ಯಾವ ದಿಕ್ಕಿನ ಕಡೆಗೆ ಹಿಸ್ಸೆ ಬಂದಿದೆ ಎಂದು ತಿಳಿಸಲು ನಕ್ಷೆಯನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿದಾರರಿಗೆ ನಿಪಿ 1 ರಿಂದ 21 ರ ದಾಖಲೆಗಳನ್ನು ತೋರಿಸಲಾಗಿ ಅದನ್ನು ನೋಡಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂತಲೂ ಅವಶ್ಯಕವಿದ್ದಲ್ಲಿ ಹಾಜರುಪಡಿಸುವುದಾಗಿ ತಿಳಿಸಿರುತ್ತಾರೆ.

2. 1981 ರಲ್ಲಿ 1 ನೇ ವಾದಿ ಖರೀದಿಸಿದ ಒಟ್ಟು 10 ಎಕರೆ 26 ಗುಂಟೆ ಸ್ವತ್ತಿನ ಚಕ್ಕುಬಂದಿ ನನಗೆ ತಿಳಿದಿದೆ. ಪೂರ್ವಕ್ಕೆ ಕಲಂದರಸಾಬ್ ರಬ್ಬಾನಿಯವರ ಜಮೀನು, ಪಶ್ಚಿಮಕ್ಕೆ ಮ್ಯಾಗೇರಿ ತಿಪ್ಪಣ್ಣ, ರಾಜು ನರಸಗೊಂಡರ ಹಾಗೂ ಧ್ರಾಕ್ಷಾಯಿಣಿ ಗದಗಿಮಠ ರವರ ಜಮೀನು, ಉತ್ತರಕ್ಕೆ ಸಿದ್ದಪ್ಪ ಕನಕೇರಿಯವರ (1 ನೇ ಪ್ರತಿವಾದಿ) ಜಮೀನು, ದಕ್ಷಿಣಕ್ಕೆ ಹನುಮಂತಪ್ಪ ಅಜ್ಜಯ್ಯನವರ ಹಾಗೂ ಅರಕೇರಿ ಮಲ್ಲೇಶಪ್ಪ ರವರ ಜಮೀನು ಇರುತ್ತದೆ. ನಿಪಿ 21 ರ ಕ್ರಯಪತ್ರದಲ್ಲಿ ಉತ್ತರಕ್ಕೆ ರೈಲ್ವೇ ಹದ್ದು ಎಂದು ತೋರಿಸಲಾಗಿದೆ ಎಂದರೆ ಮೊದಲಿಗೆ ಸಿದ್ದಪ್ಪ ಕನಕೇರಿಯವರ ಜಮೀನು ಆದ ನಂತರ ರೈಲ್ವೇ ಹದ್ದು ಇರುತ್ತದೆ. ರಿ.ಸ.ನಂ.757/1 ಎ ರಲ್ಲಿ ಒಟ್ಟು 14 ಎಕರೆ 26 ಗುಂಟೆ ಪೈಕಿ ದಕ್ಷಿಣದ ಕಡೆಗೆ 10 ಎಕರೆ 26 ಗುಂಟೆಯನ್ನು 1 ನೇ ವಾದಿ ಖರೀದಿಸಿರುತ್ತಾರೆ ಎಂದರೆ ಸರಿ. ರಿ.ಸ.ನಂ.757/3 ರ 1 ಎಕರೆ 19 ಗುಂಟೆ ಜಮೀನಿನ ಸ್ವಾಧೀನತೆಯನ್ನು ಪ್ರತಿವಾದಿಯರು ನೀಡಿರುತ್ತಾರೆ ಎಂದರೆ ಸರಿ.

3. ಮೊದಲಿಗೆ ಖಾಸಗಿ ರವರಿಂದ ಹದ್ದುಬಸ್ತು ಮಾಡಿಸಿದ್ದು, 2019 ರಲ್ಲಿ ಸರ್ಕಾರದ ವತಿಯಿಂದ ಹದ್ದುಬಸ್ತು ಮಾಡಲಾಗಿರುತ್ತದೆ. ಖಾಸಗಿಯವರಿಂದ ಮಾಡಿಸಿದ ಹದ್ದುಬಸ್ತಿನ ವರದಿಯನ್ನು ಹಾಜರುಡಿಸಿರುವುದಿಲ್ಲ ಎಂದರೆ ಸರಿ. ಸದರಿ ಹದ್ದುಬಸ್ತನ್ನು ಹಾಗೆಯೇ ಸುಮ್ಮನೆ ಮಾಡಿಸಿದ್ದು ವರದಿ ಪಡೆದುಕೊಂಡಿರುವುದಿಲ್ಲ. ತಹಶೀಲ್ದಾರವರಿಗೆ ನೀಡಿದ ಅರ್ಜಿ ದಿನಾಂಕ

ನೆನಪಿಲ್ಲ. ಅವಶ್ಯಕತೆ ಇದ್ದಲ್ಲಿ ಮನವಿಯ ಪ್ರತಿಯನ್ನು ಹಾಜರುಡಿಸುತ್ತೇನೆ. ಸರ್ವೆ ಸಮಯದಲ್ಲಿ ಒಟ್ಟು 10 ಎಕರೆ 26 ಗುಂಟೆ ಜಮೀನನ್ನು ಅಳತೆ ಮಾಡಲಾಗಿರುತ್ತದೆ. ಮಾರ್ಚ-2019 ರಲ್ಲಿ ಸರ್ವೆ ಮಾಡಲು ಬರುವುದಾಗಿ ಅಧಿಕಾರಿಗಳು ನಮಗೆ ನೋಟೀಸ್ ನೀಡಿರುತ್ತಾರೆ. ರಿ.ಸ.ನಂ.757 ರ ಒಟ್ಟು ಸ್ವತ್ತು ಎಷ್ಟು ಇದೆ ಎಂದರೆ ನನಗೆ ಮಾಹಿತಿ ಇಲ್ಲ. ನಮ್ಮ ಸ್ವತ್ತಿನ ಬಗ್ಗೆ ಅಷ್ಟೇ ಮಾಹಿತಿ ಇರುತ್ತದೆ. ಸರ್ವೆ ಮಾಡುವ ಮುನ್ನ ಅಕ್ಕಪಕ್ಕದ ಜಮೀನುದಾರರಿಗೆ ನೋಟೀಸ್ ನೀಡಲಾಗಿರುತ್ತದೆ. ಈ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಾಕ್ಷಿದಾರರು ನಿಶಾನೆಗಳನ್ನು ನೋಡಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂತಲೂ ಅವಶ್ಯಕವಿದ್ದಲ್ಲಿ ಹಾಜರುಪಡಿಸುತ್ತೇನೆ ಎಂದು ನುಡಿದಿರುತ್ತಾರೆ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.